**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ20-08-2026**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ನನ್ನ ಜಾಗಕ್ಕೆ ತೊಂದರೆ ಕೊಡಬಾರದು ಎಂದು ಹೂಡಿರುತ್ತೇನೆ. ದಾವ ಆಸ್ತಿ ಸ ನಂ 188/1 ಆಗಿರುತ್ತದೆ. ದಾವ ಆಸ್ತಿ ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ನನ್ನ ತಂದೆಗೆ ಈಚಲುಪುರದ ಸ ನಂ 44 ರಲ್ಲಿ ಜಮೀನು ಮಂಜೂರಾಗಿರುತ್ತದೆ. ಸ ನಂ 44 ಮೂಲ ಯಾರ ಆಸ್ತಿ ಎಂದು ನನಗೆ ಗೊತ್ತಿಲ್ಲ. ಸ ನಂ 44 ರಲ್ಲಿ 2 ಎಕರೆ 9 ಗುಂಟೆ ಇರುತ್ತದೆ. ಸ ನಂ 44 ಆಸ್ತಿ ನನ್ನ ತಂದೆಗೆ ಮಂಜೂರಾದ ನಂತರ ನಾವು ಅದಲು ಬದಲು ಮಾಡಿಕೊಂಡಿದ್ದು, ದಾವ ಆಸ್ತಿ ಸ ನಂ 188 ಇರುತ್ತದೆ. ದಾವ ಆಸ್ತಿ ನನ್ನ ತಂದೆಗೆ ಮಂಜೂರಾದ ಆಸ್ತಿ ಆಗಿರುವುದಿಲ್ಲ. ನನ್ನ ತಂದೆಗೆ ಮಂಜೂರಾದ ಆಸ್ತಿಯ ನಕಾಶೆ ತಯಾರು ಮಾಡಿರುತ್ತಾರೆ. ದಾವ ಆಸ್ತಿ ಮೂಲ ಮಂಜುನಾಥ ಮತ್ತು ಚೈತ್ರ ರವರಿಗೆ ಸೇರಿರುತ್ತದೆ. ಸ ನಂ 188 ಒಟ್ಟು ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ಆದರೆ ನಮಗೆ 3 ಎಕರೆ ಆಗಿರುತ್ತದೆ.

ಸ ನಂ 188 ರ ಮೂಲ ಸರ್ವೆ ನಂಬರ್ 83 ಆಗಿರುತ್ತದೆ. ಸ ನಂ 83 ಹೆಚ್ ಆರ್ ಪಿ ಜಾಗವಾಗಿದ್ದು, ಸುಮಾರು 25 ಎಕರೆ ಇರುತ್ತದೆ. ಸದರಿ ಆಸ್ತಿ ಹೇಮಾವತಿ ಮುಳುಗಡೆ ಪ್ರದೇಶಕ್ಕೆ ಬದಲಾಗಿ ಮೀಸಲಿಟ್ಟ ಜಾಗವಾಗಿರುತ್ತದೆ ಎಂದರೆ ಸರಿ. ದಾವ ಆಸ್ತಿ ಮೂಲ ಚೈತ್ರ ಮತ್ತು ಮಂಜುನಾಥ ರವರಿಗೆ ಮಂಜೂರಾಗಿತ್ತು. ಅವರಿಗೆ ಒಟ್ಟು 8 ಎಕರೆ ಮಂಜೂರಾಗಿದ್ದು, ನಮಗೆ 3 ಎಕರೆ ಮಾಡಿಕೊಟ್ಟಿರುತ್ತಾರೆ. ಚೈತ್ರ ಮತ್ತು ಮಂಜುನಾಥ ರವರಿಗೆ ಸದರಿ ಆಸ್ತಿ ದುರಸ್ತಿಯಾಗಿ ಸ ನಂ 188 ಆಗಿರುತ್ತದೆ. ನಾನು ಸದರಿ ಮಂಜೂರಾತಿ ದಾಖಲಾತಿಗಳನ್ನು ನೋಡಿರುತ್ತೇನೆ. ಪಹಣಿ, ನಕಾಶೆ, ಖಾತೆ ದಾಖಲಾತಿಗಳನ್ನು ನೋಡಿರುತ್ತೇನೆ. ಮಂಜೂರಾತಿ ಪ್ರಮಾಣ ಪತ್ರ ನೋಡಿರುವುದಿಲ್ಲ. ಚೈತ್ರ ಮತ್ತು ಮಂಜುನಾಥ ರವರಿಗೆ ಸ ನಂ 83 ರಲ್ಲಿ 8 ಎಕರೆ ಮಂಜೂರಾದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಅದು ದುರಸ್ತು ಆಗಿ ಸ ನಂ 188, 8 ಎಕರೆ ಇರುತ್ತದೆ.

ನಾನು ದಾವ ಆಸ್ತಿಯ ಮಂಜೂರಾತಿ ಪತ್ರ ಮತ್ತು ನಕಾಶೆಯನ್ನು ನೋಡಿರುವುದಿಲ್ಲ ಆದರೆ ನನ್ನ ತಂದೆ ನೋಡಿರುತ್ತಾರೆ. ಅದಲು-ಬದಲು ಪತ್ರ ಆಗುವ ಸಮಯಕ್ಕೆ ಚೈತ್ರ ಮತ್ತು ಮಂಜುನಾಥ ರವರು ದಾವ ಆಸ್ತಿಯ ಮಂಜೂರಾತಿ ಪತ್ರ, ನಕಾಶೆ ಮತ್ತು ಅಧಿಕೃತ ಜ್ಞಾಪನ

ಪತ್ರವನ್ನು ನಮ್ಮ ತಂದೆಯವರಿಗೆ ನೀಡಿರುತ್ತಾರೆ ನನಗೆ ಗೊತ್ತಿಲ್ಲ. ಅವುಗಳನ್ನು ಹಾಜರುಪಡಿಸಲು ತೊಂದರೆ ಇದ್ದೇಯೋ ಎಂದರೆ ಸಾಕ್ಷಿ ಮನೆಯಲ್ಲಿ ಇದ್ದರೇ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಸಂಬಂಧಪಟ್ಟ ಕಚೇರಿಯಲ್ಲಿ ಸದರಿ ದಾಖಲಾತಿಗಳು ಸಿಗುತ್ತದೆ ಎಂದರೆ ಸರಿ. ಈ ದಾವೆ ಹೂಡುವ ಮೊದಲು ಸದರಿ ದಾಖಲಾತಿಗಳನ್ನು ಪರಿಶೀಲನೆ ಮಾಡಿ ದಾವೆ ಹೂಡಲು ತೊಂದರೆ ಇರಲಿಲ್ಲ. ಆದರೆ ಆಗ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

ಸ ನಂ 188 ರಲ್ಲಿ ನಮಗೆ 3 ಎಕರೆ ಕಳೆದು ಉಳಿದ 5 ಎಕರೆ ರಾಜೇಶ್ ರವರ ಹೆಸರಿನಲ್ಲಿ ಇರುತ್ತದೆ. 3 ಎಕರೆ ಜಮೀನನ್ನು ನಮಗೆ ಅದಲು-ಬದಲು ಪತ್ರ ಮಾಡಿಕೊಟ್ಟಿದ್ದು, ಸ ನಂ 83 ರಲ್ಲಿ 2 ಎಕರೆ ಜಮೀನನ್ನು ಜಿ ಪಿ ಎ ಮೂಲಕ ನಮಗೆ ನೀಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಎರಡು ಜಾಗಗಳು ಅಕ್ಕಪಕ್ಕ ಇರುತ್ತದೆ. ಉಳಿದ 3 ಎಕರೆ ರಾಜೇಶ್ ರವರಿಗೆ ಮಾಡಿಕೊಟ್ಟಿರುತ್ತಾರೆ. 8 ಎಕರೆ ಆಸ್ತಿಯನ್ನು ಅಳೆದು ನಕಾಶೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ 3 ಎಕರೆ ನೀಡಿರುತ್ತಾರೆಂದು ತಿಳಿಸಿದ್ದರಿಂದ ಒಂದು ಭಾಗಕ್ಕೆ ಉಳಿದ 5 ಎಕರೆ ಬರಬೇಕು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮರಣಹೊಂದಿರುತ್ತಾರೆ. 2015 ರಲ್ಲಿ ನನಗೆ 40 ವರ್ಷ ವಯಸ್ಸಾಗಿತ್ತು. ನಾನು ನಿ ಪಿ 1 ಅದಲು-ಬದಲು ಪತ್ರದಲ್ಲಿ ಭಾಗವಹಿಸಿದ್ದೆ.

ನನ್ನ ತಂದೆ ಅನಕ್ಷರಸ್ಥರಾಗಿದ್ದರು. ನಿ ಪಿ 1 ದಾಖಲಾತಿಯನ್ನು ನಾವು ಓದಿ ಸಹಿ ಮಾಡಿರುವುದಿಲ್ಲ. ಅದರಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿರುತ್ತದೆ. ನಿ ಪಿ 1 ರ ಸಮಯದಲ್ಲಿ ಪ್ರತ್ಯೇಕ ನಕಾಶೆಯನ್ನು ತಯಾರಿಸಿರುತ್ತಾರೆ. ನಿ ಪಿ 1 ರ ಪತ್ರದಂತೆ ನಾವು ದಾವ ಆಸ್ತಿಗೆ ಹೋಗಿ ಅಳತೆ ಮಾಡಿ ಸ್ವಾಧೀನ ಪಡೆದಿರುತ್ತೇವೆ. ದಾವ ಆಸ್ತಿಗೆ ಪ್ರತ್ಯೇಕವಾಗಿ ಗಡಿ ಕಲ್ಲನ್ನು ಹಾಕಿಕೊಟ್ಟಿರುತ್ತಾರೆ. ಬೆಳ್ಳೂರು ಗ್ರಾಮದಲ್ಲಿ ಪ್ರತಿವಾದಿ ವಾಸವಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಬೆಳ್ಳೂರಿನಲ್ಲಿ 50 ವರ್ಷಗಳಿಂದ ವಾಸವಾಗಿರುತ್ತೇನೆ. **ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಲಾಗಿ ಅದು ಹೆಚ್ ಆರ್ ಪಿ ಜಾಗದಲ್ಲಿ ಯಾರೋ ಮನೆ ಕಟ್ಟಿ ಹೋಗಿರುವುದಾಗಿ ನುಡಿಯುತ್ತಾರೆ. ಸದರಿ ಪೋಟೋದಲ್ಲಿ ಪ್ರತಿವಾದಿ ಇರುತ್ತಾರೆ. ಆದ್ದರಿಂದ ಪೋಟೋವನ್ನು ನಿ ಡಿ 1 ಎಂದು ಗುರುತಿಸಲಾಯಿತು.** ಆದರೆ ಸದರಿ ಮನೆಯಲ್ಲಿ ಯಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆ ಸ ನಂ 83 ರಲ್ಲಿ ಇರುತ್ತದೆ.

ಸಾಕ್ಷಿಗೆ ಈಗ ಒಂದು ಕಂದಾಯ ರಶೀದಿಯನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿರುವುದಿಲ್ಲ. ಅದನ್ನು ನಕಲು ಮಾಡಿ ತಂದಿರುತ್ತಾರೆಂದು ನುಡಿಯುತ್ತಾರೆ. ಆದ್ದರಿಂದ ಅದನ್ನು ಗುರುತಿಸಿರುವುದಿಲ್ಲ. **ಸಾಕ್ಷಿಗೆ ಈಗ ವಿದ್ಯುತ್ ಬಿಲ್ ನ್ನು ತೋರಿಸಲಾಗಿ ಅದು ಸದರಿ ನಿ ಡಿ 1 ಮನೆಯ ವಿದ್ಯುತ್ ಬಿಲ್ ಆಗಿರುತ್ತದೆ ಎಂದು ಕೇಳಲಾಗಿ ಅದನ್ನು ಗುರುತಿಸಿರುತ್ತಾರೆ. ಆದ್ದರಿಂದ ಅದನ್ನು ನಿ ಡಿ 2 ಎಂದು ಗುರುತಿಸಲಾಯಿತು.** ಸದರಿ ನಿ ಡಿ 1 ಮನೆ ಕುರುಬ್ಬತ್ತೂರು ಗ್ರಾಮ ಪಂಚಾಯ್ತಿ ಯಲ್ಲಿಕನಕ ಕೋಂ ಮಲ್ಲೇಶ ರವರ ಹೆಸರಿಗೆ ಸ್ವತ್ತಿನ ಸಂಖ್ಯೆ 116 ರಲ್ಲಿ ಇರುತ್ತದೆ ಎಂದರೆ ಅದನ್ನು ಪ್ರತಿವಾದಿ ಸೃಷ್ಟಿ ಮಾಡಿ ಪಂಚಾಯಿತಿಯಿಂದ ಬರೆಸಿಕೊಂಡು ಬಂದಿರುತ್ತಾರೆಂದು ನುಡಿಯುತ್ತಾರೆ.

ಪ್ರತಿವಾದಿ ನನ್ನ ವಿರುದ್ದ ಅಸಲು ದಾವ ನಂಬರ್ 2/2026 ರಂತೆ ಈ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆಂದರೆ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದುರುದ್ದೇಶದಿಂದ ನನಗೆ ಸದರಿ ದಾವೆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯವರು ಸಲ್ಲಿಸಿರುವ ತಕರಾರಿನ ಬಗ್ಗೆ ಗೊತ್ತಿಲ್ಲ. ನಮ್ಮ ವಕೀಲರ ಮೂಲಕ ಅದನ್ನು ತಿಳಿದುಕೊಂಡಿರುವುದಿಲ್ಲ. ರಾಜು ಬಿನ್ ಮಲ್ಲಯ್ಯ ಎಂದರೆ ನನ್ನ ಅಣ್ಣ ಇರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**